ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು

| | | |
|---|---|---|
| ಸಾಕ್ಷಿಯ ಹೆಸರು | :- | ಶಶಿಧರ್ |
| ತಂದೆ/ಗಂಡನ ಹೆಸರು | :- | ಕೆಂಪಣ್ಣ |
| ವಯಸ್ಸು | :- | 51 ವರ್ಷ |
| ಉದ್ಯೋಗ | :- | ಖಾಸಗಿ ಕೆಲಸ |
| ವಾಸಸ್ಥಳ | :- | ಬೆಂಗಳೂರು |

(ಸಾಕ್ಷಿಗೆ ದಿನಾಂಕಃ 29-07-2025 ರಂದು ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ನಾನು ಆರೋಪಿಯನ್ನು ನೋಡಿಲ್ಲ. ಸೆಪ್ಟಂಬರ್ 2018 ರಂದು ಬೆಂಗಳೂರಿನಿಂದ ಮಂಡ್ಯಗೆ ಕೆಎ-53-ಎಂ ಸಿ-9999 ಇನೋವಾ ಕಾರಿನಲ್ಲಿ ಬರುತ್ತಿದ್ದಾಗ, ಗೆಜ್ಜಲಗೆರೆ ಬಳಿಯಲ್ಲಿ ಕೆ ಎಸ್ ಆರ್ ಟಿ ಸಿ ಬಸ್ಸೊಂದು ಅತಿವೇಗದಿಂದ ಚಾಲನೆ ಮಾಡಿ ನಮ್ಮನ್ನು ಓವರ್ ಟೇಕ್ ಮಾಡಲು ಪ್ರಯತ್ನಿಸುತ್ತಿತ್ತು, ಸದರಿ ಬಸ್ಸಿನ ಎದುರುಗಡೆಯಲ್ಲಿ ಖಾಸಗಿ ಬಸ್ಸೊಂದು ನಿಂತಿದ್ದು ಕೆ ಎಸ್ ಆರ್ ಟಿ ಸಿ ಬಸ್ಸಿನವರು ಸದರಿ ಬಸ್ಸು ಇರುವುದನ್ನು ಕಂಡು ಎಡಭಾಗದಿಂದ ಬಲಭಾಗಕ್ಕೆ ತಕ್ಷಣದಲ್ಲಿ ತಿರುಗಿಸಿದ್ದು, ಆದ್ದರಿಂದ ಸದರಿ ಖಾಸಗಿ ಬಸ್ಸಿನ ಹಿಂಭಾಗಕ್ಕೆ ಕೆ ಎಸ್ ಆರ್ ಟಿ ಸಿ ಬಸ್ಸಿನ ಮುಂಭಾಗಕ್ಕೆ ಗುದ್ದಿರುತ್ತದೆ ಆದ್ದರಿಂದ ನನ್ನ ಕಾರಿನ ಮುಂಭಾಗ ಕೆ ಎಸ್ ಆರ್ ಟಿ ಸಿ ಬಸ್ಸಿನ ಹಿಂಬಾಗಕ್ಕೆ ಗುದ್ದಿರುತ್ತದೆ. ಸದರಿ ವೇಳೆಯಲ್ಲಿ ನನ್ನಹೆಂಡತಿ ಮಕ್ಕಳ ಸಂರಕ್ಷಣೆಗಾಗಿ ಗಮನ ಹರಿಸಿದಾಗ ಸದರಿ ಕೆ ಎಸ್ ಆರ್ ಟಿ ಸಿ ಬಸ್ಸಿನ ಚಾಲಕ ಇಳಿದು ಓಡಿ ಹೋಗಿದ್ದರು, ಸದರಿ ಎರಡು ಬಸ್ಸುಗಳ ಪ್ಯಾಸೆಂಜರ್ ಗಳಿಗೆ ಗಾಯಗಳಾಗಿತ್ತು ಎಂದು ತಿಳಿದುಬಂದಿತ್ತು. ನಂತರ ನಾನು ನನ್ನ ವಾಹನವನ್ನು ಠಾಣೆಯಲ್ಲಿ ಬಿಟ್ಟು ನಾವು ಹೋಗಿರುತ್ತೇವೆ. ಮೂರು ದಿನಗಳ ನಂತರ ಮಂಡ್ಯದ ಆರ್ ಟಿ ಓ ದಿಂದ ವಾಹನ ಬಿಡುಗಡೆ ಪತ್ರವನ್ನು ತಂದು ಠಾಣೆಯಲ್ಲಿ ಬಾಂಡ್ ಬರೆದುಕೊಟ್ಟು ಠಾಣೆಯಿಂದ ವಾಹನ ಬಿಡಿಸಿಕೊಂಡಿರುತ್ತೇನೆ. ಸದರಿ ಬಾಂಡ್ ನ್ನು ನಿಪಿ-34 ಎಂದು, ಸಾಕ್ಷಿಯ ಸಹಿಯನ್ನು ನಿಪಿ-34(ಎ) ಎಂದು , ವಾಹನದ ಪೋಟೋಗಳನ್ನು ನಿಪಿ-35 ಮತ್ತು 36 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಮಾನ್ಯ ಸ.ಸ.ಅ. ರವರು ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ

ಕೋರಿರುತ್ತಾರೆ. ಸ.ಸ.ಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನ್ಯಾಯಾಲಯದ ಮುಂದೆಯಿರುವ ಆರೋಪಿಯೇ ಆ ದಿನ ಅಪಘಾತಪಡಿಸಿದ ವ್ಯಕ್ತಿಯಾಗಿ ಚಾಲಕನಾಗಿದ್ದಾರೆಂದರೆ ನಾನು ನೋಡಿಲ್ಲ ಸದರಿ ಕೆ ಎಸ್ ಆರ್ ಟಿ ಬಸ್ ನಂಃ ಕೆಎ-09-ಎಫ್ -5180 ಎಂದರೆ ನಂಬರ್ ಮರೆತು ಹೋಗಿದೆ ಆದರೆ ಕೆ ಎಸ್ ಆರ್ ಟಿ ಸಿ ಬಸ್ಸಾಗಿತ್ತು. ಮತ್ತೊಂದು ಖಾಸಗಿ ಬಸ್ಸಿನ ನಂಃ ಕೆಎ-51-3333 ಎಂದರೆ ನನಗೆ ಗೊತ್ತಿಲ್ಲ. ಅಪಘಾತವೂ ಕೆ ಎಸ್ ಆರ್ ಟಿ ಸಿ ಬಸ್ಸಿನ ಚಾಲಕನ ಅತಿವೇಗ ಮತ್ತು ಅಜಾಗರೂಕತೆಯಿಂದ ಆಗಿದೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್ ಎಲ್ ಡಿ ವಕೀಲರವರಿಂದಃ-**

ನಾನು ಪೊಲೀಸರಿಗೆ ಅದೇ ದಿನ ಸಂಜೆ ಘಟನೆಯ ವಿಚಾರವಾಗಿ ಹೇಳಿಕೆ ನೀಡಿದ್ದೇನೆ. ನಾನು ಕಾರನ್ನು ಚಲಾಯಿಸುತ್ತಿದ್ದಾಗ ಖಾಸಗಿ ಬಸ್ಸು ನಿಂತಿರುವುದನ್ನು ಗಮನಿಸಿದ್ದೆ. ಸದರಿ ಬಸ್ಸು ಅರ್ಧ ಪುಟ್ ಫಾತ್ ಅರ್ಧ ರಸ್ತೆಗೆ ಹೊಂದಿಕೊಂಡಂತೆ ನಿಂತಿತ್ತು. ಸದರಿ ವಿಚಾರವನ್ನು ನನ್ನ ಹೇಳಿಕೆಯಲ್ಲಿ ಹೇಳಿದ್ದೇನೆ. ನಾನು ಹೇಳಿಕೆಯಲ್ಲಿ ಕೆ ಎಸ್ ಆರ್ ಟಿ ಸಿ ಬಸ್ಸು ನನ್ನ ಎಡಭಾಗದಲ್ಲಿ ಓವರ್ ಟೇಕ್ ಮಾಡಿ ಬಂದಿತ್ತು ಎಂಬ ವಿಚಾರ ಹೇಳಿದ್ದೇನೆ. ಪ್ರಕರಣವೂ ಪೊಲೀಸ್ ಪ್ರಕರಣವಾಗಬಹುದು ಎಂದು ಸ್ಥಳದಲ್ಲಿ ವಾಹನವನ್ನು ನಿಲ್ಲಿಸಿ ಬೇರೆ ವಾಹನದ ಸಹಾಯದಿಂದ ಮೈಸೂರಿಗೆ ಹೋಗಿದ್ದೆ ಎಂದು ಹೇಳಿರುವುದಿಲ್ಲ. ಕೆ ಎಸ್ ಆರ್ ಟಿ ಸಿ ಬಸ್ಸಿನ ಚಾಲಕ ನನ್ನ ಎಡಭಾಗದಿಂದ ಓವರ್ ಟೇಕ್ ಮಾಡಿ ಮುಂದೆ ಹೋಗಿದ್ದಾರೆಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಸ್ಥಳವೂ ಬಸ್ ನಿಲ್ದಾಣ ಆಗಿಲ್ಲದೇ ಗೆಜ್ಜಲಗೆರೆ ಯಲ್ಲಿರುವ ಗಾರ್ಮೆಂಟ್ಸ್ ಕಾರ್ಮಿಕರು ಹತ್ತಲು, ಇಳಿಯಲು ನಿಲ್ಲಿಸುತ್ತಾರೆ. ಸದರಿ ಸ್ಥಳದಲ್ಲಿ ಖಾಸಗಿ ವಾಹನವೂ ತಕ್ಷಣದಲ್ಲಿ ನಿಲ್ಲಿಸಿದ್ದರಿಂದ ಕೆ ಎಸ್ ಆರ್ ಟಿ ಸಿ ಬಸ್ಸು ಸದರಿ ವಾಹನಕ್ಕೆ ತಗಲಿ ಅಪಘಾತವಾಗಿದ್ದು, ಅಪಘಾತವೂ ಖಾಸಗಿ ಬಸ್ಸಿನವರ ಚಾಲಕನಿಂದ ಆಗಿದೆ ಎಂದರೆ ಸರಿಯಲ್ಲ. ಕೆ ಎಸ್ ಆರ್ ಟಿ ಸಿ ಬಸ್ಸಿನ ಚಾಲಕನಿಂದ ಅಪಘಾತ

ಆಗಿಲ್ಲದಿದ್ದರೂ ಖಾಸಗಿ ಬಸ್ಸನವರೊಂದಿಗೆ ಶಾಮಿಲ್ ಆಗಿ ಕೆ ಎಸ್ ಆರ್ ಟಿ ಸಿ ಬಸ್ಸಿನ ಚಾಲಕನ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ನಾನು ಕೂಡಾ ಕೆ ಎಸ್ ಆರ್ ಟಿ ಸಿ ಬಸ್ಸಿಗೆ ಹಿಂದಿನಿಂದ ಗುದ್ದಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ಕೇವಲ 3-4 ಅಡಿ ಅಂತರವಿತ್ತು ಎನ್ನುತ್ತಾರೆ. ಕಾರು ದುರಸ್ತಿಗೊಂಡ ಬಗ್ಗೆ ಪರಿಹಾರ ಪಡೆದುಕೊಂಡಿದ್ದೇನೆ. ಸದರಿ ಪರಿಹಾರಕ್ಕಾಗಿ ನಾನು ಕೆ ಎಸ್ ಆರ್ ಟಿ ಸಿ ಬಸ್ಸಿನ ಮೇಲೆ ಆರೋಪ ಮಾಡುತ್ತಿದ್ದೇನೆಂದರೆ ಸರಿಯಲ್ಲ. ಆ ದಿನ ಕೆ ಎಸ್ ಆರ್ ಟಿ ಸಿ ಬಸ್ಸಿನ ಚಾಲಕ ನಿಧಾನವಾಗಿ ಜಾಗರೂಕತೆಯಿಂದಚಾಲನೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಪೊಲೀಸರು ಮತ್ತು ಖಾಸಗಿ ಬಸ್ಸಿನವರೊಂದಿಗೆ ಶಾಮಿಲ್ ಆಗಿ ಸುಳ್ಳು ಹೇಳಿಕೆ ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು